ರಾಜ್ಯದಲ್ಲಿ ತ್ವರಿತಗತಿ ನ್ಯಾಯಾಲಯಗಳ ಸ್ಥಾಪನೆ ಕುರಿತು

89 (259) ಶ್ರೀ ಸುರೇಶ್ ಕುಮಾರ್ ಎಸ್ (ರಾಜಾಜಿನಗರ) ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ತ್ವರಿತಗತಿ (ಫಾಸ್ಟ್ ಟ್ರಾಕ್) ನ್ಯಾಯಾಲಯಗಳನ್ನು ಸ್ಥಾಪಿಸಲು ನಿಶ್ಚಿಯಿಸಲಾಗಿತ್ತು

ಆ) ಎಷ್ಟು ನ್ಯಾಯಾಲಯಗಳನ್ನು ಸ್ಥಾಪಿಸಲಾಗಿದೆ?

ಶ್ರೀ ಡಿ ಬಿ ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ) 93

ಆ) 69 ನ್ಯಾಯಾಲಯಗಳನ್ನು ಸ್ಥಾಪಿಸಲಾಗಿದ್ದು, ಆ ಪೈಕಿ 63 ನ್ಯಾಯಾಲಯಗಳು ಕರ್ತವ್ಯ ನಿರ್ವಹಿಸುತ್ತಿವೆ

ಬೆಂಗಳೂರು ನಗರದ ಮುನ್ಸಿಪಾಲಿಟಿ ಕೌನ್ಸಿಲ್‌ಗಳಲ್ಲಿ ಸ್ಟ್ಯಾಂಪ್ ಡ್ಯೂಟಿ ಹೆಚ್ಚಿಗೆ ಪಡೆದಿರುವುದರ ಬಗ್ಗೆ

90 (260 ಶ್ರೀ ಸುರೇಶ್ ಕುಮಾರ್ ಎಸ್ (ರಾಜಾಜಿನಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರದ ಸುತ್ತಲೂ ಇರುವ ನಗರ ಮುನ್ಸಿಪಾಲಿಟಿ ಕೌನ್ಸಿಲ್‌ಗಳಲ್ಲಿ ಸ್ಟಾಂಪ್ ಡ್ಯೂಟಿಯನ್ನು ಹೆಚ್ಚಿಗೆ ಪಡೆದು ಹಣದ ದುರುಪಯೋಗ ಆಗಿರುವ ಪ್ರಕರಣದಲ್ಲಿ ರಾಜ್ಯದ ಲೋಕಾಯುಕ್ತರು ಇದುವರೆವಿಗೂ ಎಷ್ಟು ವರದಿಗಳನ್ನು ಸಲ್ಲಿಸಿದ್ದಾರೆ

ಆ) ಈ ವರದಿಗಳಲ್ಲಿ ಯಾವ ವ್ಯಕ್ತಿಗಳನ್ನು ತಪ್ಪಿತಸ್ಥರೆಂದು ಗುರುತಿಸಲಾಗಿದೆ

ಇ) ಈ ಕುರಿತಂತೆ ಸರ್ಕಾರ ಕೈಗೊಂಡಿರುವ ಕ್ರಮಗಳೆನು

ಈ) ಲೋಕಾಯುಕ್ತ ವರದಿಯ ಪ್ರಕಾರ ದುರುಪಯೋಗ ಆಗಿರುವ ಹಣದ ಮೊತ್ತ ವೆಷ್ಟು?

ಶ್ರೀ ಎಸ್ ಎಂ ಕೃಷ್ಣ (ಮುಖ್ಯಮಂತ್ರಿಯವರು)

ಅ) ಒಂದು

ಆ) ಅನುಬಂಧದಲ್ಲಿ ನೀಡಲಾಗಿದೆ

ಇ) ಎಲ್ಲಾ 22 ಅಧಿಕಾರಿಗಳ ವಿರುದ್ಧವೂ ಪೂರ್ಣ ಪ್ರಮಾಣದ ಇಲಾಖಾ ವಿಚಾರಣೆಯನ್ನು ದಿನಾಂಕ 10-12-2003ರ ಆದೇಶದಲ್ಲಿ ಸನ್ಮಾನ್ಯ ಲೋಕಾಯುಕ್ತರಿಗೆ ವಹಿಸಲಾಯಿತು ನಿವೃತ್ತಿ ಹೊಂದಿದ 3 ಅಧಿಕಾರಿಗಳನ್ನು ಹೊರತುಪಡಿಸಿ ಸೇವೆಯಲ್ಲಿರುವ ಎಲ್ಲಾ 19 ಅಧಿಕಾರಿ ನೌಕರರನ್ನು ಅಮಾನತ್ತುಗೊಳಿಸಲಾಗಿದೆ

ಈ) ಲೋಕಾಯುಕ್ತ ವರದಿಯ ಪ್ರಕಾರ ಖಜಾನೆಯಿಂದ 7 ನಗರಸಭೆಗಳು ಅನಧಿಕೃತವಾಗಿ ತೆಗೆದ ಮೊತ್ತ ರೂ 231,67,36,342-00 ಆಗಿರುತ್ತದೆ

ಅನುಬಂಧ

ಚುಕ್ಕೆ ಗುರುತಿಲ್ಲದ ವಿಧಾನ ಸಭಾ ಪ್ರಶ್ನೆ ಸಂಖ್ಯೆ 260 ರ (ಅ)

ಶ್ರೀ ಶ್ರೀಮತಿ

1 ಕೆ ಎಂ ರಾಮಚಂದ್ರನ್, ಕೆ ಎಎಸ್,

2 ಹೆಚ್ ವಿ ಆತ್ಮರಾಮಯ್ಯ, ಕೆಎಎಸ್,
3 ಆರ್ ಲಕ್ಷ್ಮಯ್ಯ, ಜಿಲ್ಲಾ ನೋಂದಣಾಧಿಕಾರಿ,
4 ಕೆ.ಪಿ ರಾಜನ್, ಖಜಾನೆ ಉಪ ನಿರ್ದೇಶಕರು,
5 ಎಸ್ ಎ ಬಂಡೇಕರೆ, ಖಜಾನೆ ಉಪ ನಿರ್ದೇಶಕರು,
6 ರಾಮಸ್ವಾಮಿ, ಹಿಂದಿನ ನಗರಸಭೆ ಆಯುಕ್ತರು,
7 ಎನ್ ಶಿವಬಸವಯ್ಯ, ಹಿಂದಿನ ನಗರಸಭೆ ಆಯುಕ್ತರು,
8 ಅರ್ ಟಿ ಗೌಡ, ಹಿಂದಿನ ನಗರಸಭೆ ಆಯುಕ್ತರು,
9 ಹೆಚ್ ಎಸ್ ಪ್ರಸನ್ನಕುಮಾರ್, ಹಿಂದಿನ ನಗರಸಭೆ ಆಯುಕ್ತರು
10 ಡಾ ಟಿ ಹೆಚ್ ವಿಶ್ವನಾಥ್, ಹಿಂದಿನ ನಗರಸಭೆ ಆಯುಕ್ತರು,
11 ಎನ್ ಕೃಷ್ಣ, ಹಿಂದಿನ ನಗರಸಭೆ ಆಯುಕ್ತರು,
12 ಹೆಚ್ ಆರ್ ಜಗದೀಶ್, ಹಿಂದಿನ ನಗರಸಭೆ ಆಯುಕ್ತರು,
13 ಆರ್ ಶ್ರೀನಿವಾಸ್, ಹಿಂದಿನ ನಗರಸಭೆ ಆಯುಕ್ತರು,
14 ಹಾಷಿವರ್ ಬಿನ್ ಅಲಿ ಹಿಂದಿನ ನಗರಸಭೆ ಆಯುಕ್ತರು,
15 ಹುಲ್ಲೂರಯ್ಯ, ಹಿಂದಿನ ನಗರಸಭೆ ಆಯುಕ್ತರು,
16 ಸೇತು ಮಾಧವರಾವ್, ಉಪ ಖಜಾನೆ ಅಧಿಕಾರಿ,
17 ಡಿ ಎನ್ ವೆಂಕಟರಮಣ, ಉಪ ಖಜಾನೆ ಅಧಿಕಾರಿ,
18 ಹೆಚ್ ವಿ ಹನುಮಂತಯ್ಯ, ಮುಖ್ಯ ಲೆಕ್ಕಿಗರು,
19 ಡಿ ಎಸ್ ಸುರೇಶ್, ಪ್ರಥಮ ದರ್ಜೆ ಸಹಾಯಕರು,
20 ಕೆ.ಎನ್ ನರಸಿಂಹರೆಡ್ಡಿ, ಪ್ರಥಮ ದರ್ಜೆ ಸಹಾಯಕ,
21 ಕೆ ಹೆಚ್ ಕರಿಯಪ್ಪ, ದ್ವಿತೀಯ ದರ್ಜೆ ಸಹಾಯಕ,
22 ಕೆ ರವಿ, ದ್ವಿತೀಯ ದರ್ಜೆ ಸಹಾಯಕ

ಚಿಕ್ಕನಾಯಕನ ಹಳ್ಳಿ ಕ್ಷೇತ್ರದ ಹಂದನಕೆರೆಯ ಉಪ ವಿದ್ಯುತ್ ಸ್ಥಾವರದ ಬಗ್ಗೆ

91 (172) ಶ್ರೀ ಸುರೇಶ್ ಬಾಬು ಸಿ ಬಿ (ಚಿಕ್ಕನಾಯಕನಹಳ್ಳಿ) ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಕ್ಕನಾಯಕನಹಳ್ಳಿ ತಾ ಹಂದನಕೆರೆಗೆ ವಿದ್ಯುತ್ ಉಪಸ್ಥಾವರ ಕೇಂದ್ರವು ಮಂಜೂರಾಗಿದ್ದು, ಇದುವರೆವಿಗೂ ಕಾಮಗಾರಿಯು ಪ್ರಾರಂಭವಾಗದಿರಲು ಕಾರಣಗಳೇನು

ಆ) ಎಷ್ಟು ದಿನಗಳಲ್ಲಿ ಈ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ)ಮತ್ತು ಆ) ಚಿಕ್ಕನಾಯಕನ ಹಳ್ಳಿ ತಾಲ್ಲೂಕು, ಹಂದನಕೆರೆಯಲ್ಲಿ ಒಂದು 110/11 ಕೆ ವಿ ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸುವ ಪ್ರಸ್ತಾವನೆಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ತಾಂತ್ರಿಕ ಸಮಿತಿಯು ಅನುಮೋದನೆಯನ್ನು ನೀಡಿರುತ್ತದೆ

ಈ ವಿದ್ಯುತ್ ಉಪ ಕೇಂದ್ರದ ನಿರ್ಮಾಣ ಕಾಮಗಾರಿಗಳಿಗೆ ಆರ್ಥಿಕ ಒಡಂಬಡಿಕೆಯನ್ನು ಹುಡ್ಕೋ ಸಂಸ್ಥೆಯೊಂದಿಗೆ ಮಾಡಿಕೊಳ್ಳಲಾಗಿದೆ ಈ ಕಾಮಗಾರಿಯನ್ನು ಪ್ರಸಕ್ತ ಸಾಲಿನ (2003–